ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

# HASSAN INSTITUTE OF MEDICAL SCIENCES, HASSAN

**(An Autonomous Institute under the Dept of Medical Education)**

**SRI CHAMARAJENDRA HOSPITAL CAMPUS, HASSAN-573201**

**Website: www.hims-hassan.org, Phone/Fax No.08172-231699,**

## 3ನೇ ಆರ್ಥಿಕ ಸಮಿತಿ ಸಭೆಯ ನಡವಳಿಗಳು

ದಿನಾಂಕ: 16-07-2009,

ಸ್ಥಳ:

ಕೊಠಡಿ ಸಂಖ್ಯೆ:341, 3ನೇ ಮಹಡಿ,

ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ,

ವಿಧಾನ ಸೌಧ, ಬೆಂಗಳೂರು

## ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಯ ಮೂರನೇ ಆರ್ಥಿಕ ಸಮಿತಿ ಸಭೆ ನಡಾವಳಿಗಳು

ದಿನಾಂಕ:16-07-2009ರ ಗುರುವಾರ, ಬೆಳಗ್ಗೆ 11-30ಗಂಟೆಗೆ ಗೌರವಾನ್ವಿತ ಪ್ರಧಾನ ಕಾರ್ಯದರ್ಶಿಗಳು (ವೈದ್ಯಕೀಯ ಶಿಕ್ಷಣ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ;341, ವಿಧಾನ ಸೌಧ, ಬೆಂಗಳೂರು ಇಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮೂರನೇ ಆರ್ಥಿಕ ಸಮಿತಿ ಸಭೆ ಸೇರಿ ನಡೆಸಿದ ಸಭಾ ನಡುವಳಿಗಳು.

**ಹಾಜರಿದ್ದ ಗೌರವಾನ್ವಿತ ಸದಸ್ಯರುಗಳು:**

| | | | |
|---|---|---|---|
| 1 | **ಶ್ರೀ ವಿ. ಉಮೇಶ್**<br>ಪ್ರಧಾನ ಕಾರ್ಯದರ್ಶಿಗಳು( ವೈ.ಶಿ),<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>ಬೆಂಗಳೂರು. | : | ಅಧ್ಯಕ್ಷರು |
| 2 | **ಶ್ರೀ. ಎಸ್.ಅನೀಸ್ ಸಿರಾಜ್**<br>ಅಪರ ಕಾರ್ಯದರ್ಶಿಗಳು,(ವೈ.ಶಿ),<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>ವಿಕಾಸ ಸೌಧ, ಬೆಂಗಳೂರು. | : | ಸದಸ್ಯರು |
| 3 | **ಡಾ. ಅರುಣಾ**<br>ನಿರ್ದೇಶಕರು, (ವೈ.ಶಿ),<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>ವಿಕಾಸ ಸೌಧ, ಬೆಂಗಳೂರು. | : | ಸದಸ್ಯರು |
| 4 | **ಡಾ. ಕೆ.ಎಸ್. ಗಂಗಾಧರ**<br>ನಿರ್ದೇಶಕರು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ,<br>ಹಾಸನ. | : | ಸದಸ್ಯರು |
| 5 | **ಶ್ರೀ ವೆಂಕಟೇಶ ಗೌಡ**<br>ಮುಖ್ಯ ಆಡಳಿತಾಧಿಕಾರಿ,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ , ಹಾಸನ. | : | ಸದಸ್ಯರು |
| 6 | **ಶ್ರೀ. ಶ್ರೀನಿವಾಸ ಗೌಡ**<br>ಆರ್ಥಿಕ ಅಧಿಕಾರಿ.<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ , ಹಾಸನ. | : | ಸದಸ್ಯ ಕಾರ್ಯದರ್ಶಿ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಮ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 1 | ಹಿಂದಿನ ಸಭಾ ನಡುವಳಿಯನ್ನು ಓದಿ ರೆಕಾರ್ಡ್ ಮಾಡಿ ಅನುಪಾಲನ ವರದಿಯನ್ನು ಅಂಗೀಕರಿಸುವುದು. | ದಿನಾಂಕ:09-04-2008ರಂದು ಗೌರವಾನ್ವಿತ ಕಾರ್ಯದರ್ಶಿಗಳು (ವೈದ್ಯಕೀಯ ಶಿಕ್ಷಣ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಎರಡನೇ ಆರ್ಥಿಕ ಸಮಿತಿ ಸಭೆಯ ಅಜೆಂಡಾ ಕ್ರಮ ಸಂಖ್ಯೆ: 1 ರಿಂದ 8ರವರೆಗಿನ ಸಭಾ ನಡುವಳಿಗಳು ಹಾಗೂ ಸಭಾ ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಅನುಪಾಲನಾ ವರದಿಯನ್ನೂ ಸಹ ಓದಿ ಅಂಗೀಕರಿಸಲಾಯಿತು. |
| 2 | ದಿನಾಂಕ:30-07-2008 ರಂದು ನಡೆದ ಖರೀದಿ ಸಮಿತಿ ಸಭೆಯ ನಡುವಳಿಯನ್ನು ಓದಿ ರೆಕಾರ್ಡ್ ಮಾಡಿ ಅಂಗೀಕರಿಸುವುದು ಹಾಗೂ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಅನುಪಾಲನ ವರದಿಯನ್ನು ಅಂಗೀಕರಿಸುವುದು. | ದಿನಾಂಕ:30-07-2008ರಂದು ಸಂಸ್ಥೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ಖರೀದಿ ಸಮಿತಿ ಸಭೆಯ ಅಜೆಂಡಾ ಕ್ರಮ ಸಂಖ್ಯೆ: 1ರಿಂದ 13ರವರೆಗಿನ ನಡವಳಿಗಳನ್ನು ಓದಿ ಅಂಗೀಕರಿಸಿ ರೆಕಾರ್ಡ್‌ಮಾಡಲಾಯಿತು. ಹಾಗೂ ಸದರಿ ಸಭೆಯ ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಅನುಪಾಲನವರದಿಯನ್ನೂ ಸಹ ಅಂಗೀಕರಿಸಲಾಯಿತು. |
| 3 | ದಿನಾಂಕ 05-01-2009ರಂದು ನಡೆದ ಖರೀದಿ ಸಮಿತಿ ಸಭೆಯ ನಡುವಳಿಯನ್ನು ಓದಿ ರೆಕಾರ್ಡ್ ಮಾಡಿ ಅಂಗೀಕರಿಸುವುದು ಹಾಗೂ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಅನುಪಾಲನ ವರದಿಯನ್ನು ಅಂಗೀಕರಿಸುವುದು. | ದಿನಾಂಕ: 05-01-2009ರಂದು ಸಂಸ್ಥೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ಖರೀದಿ ಸಮಿತಿ ಸಭೆಯ ಅಜೆಂಡಾ ಕ್ರಮ ಸಂಖ್ಯೆ: 1 ರಿಂದ 11 ರವರೆಗಿನ ನಡವಳಿಗಳನ್ನು ಓದಿ ಅಂಗೀಕರಿಸಿ ರೆಕಾರ್ಡ್ ಮಾಡಲಾಯಿತು. ಹಾಗೂ ಸದರಿ ಸಭೆಯ ನಡುವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಅನುಪಾಲನವರದಿಯನ್ನೂ ಸಹ ಅಂಗೀಕರಿಸಲಾಯಿತು.<br>ಮಾನ್ಯ ಮಾನ್ಯ ಪ್ರಧಾನ ಕಾರ್ಯದರ್ಶಿಯವರು, ಉಪಕರಣಗಳ ಖರೀದಿಯ ವೆಚ್ಚದ ಅಗತ್ಯತೆಯ ಬಗ್ಗೆ ಚರ್ಚಿಸಿ ಉಪಕರಣಗಳ ಖರೀದಿಗಾಗಿ ಹೆಚ್ಚು ಹಣವನ್ನು ಖರ್ಚುಮಾಡುತ್ತಿರುವುದರಿಂದ ಸಂಸ್ಥೆಗೆ ಬರುವ ಆದಾಯವನ್ನು ಹೆಚ್ಚಿಸಿಕೊಳ್ಳುವುದು ಅತ್ಯವಶ್ಯಕವೆಂದು ತಿಳಿಸಿದರು. ಹಾಗೂ ಆದಾಯದ ಹೆಚ್ಚುವರಿಗಾಗಿ ಆರೋಗ್ಯ ರಕ್ಷಾ ಸಮಿತಿ ಸಭೆಯಲ್ಲಿ ಚರ್ಚಿಸಿ ಆದಾಯವನ್ನು ಹೆಚ್ಚಿಸಿ ಕೊಳ್ಳು ಕ್ರಮ ಕೈಗೊಳ್ಳುವಂತೆ ನಿರ್ದೇಶಕರಿಗೆ ಸೂಚಿಸಲಾಯಿತು ಮತ್ತು |

| | | |
|---|---|---|
| | | ಸಾರ್ವಜನಿಕರು, ಸಂಘ ಸಂಸ್ಥೆಗಳು ಮತ್ತು ಪ್ರಜಾ ಪ್ರತಿನಿಧಿಗಳ ನಿಧಿಯಿಂದ ಸಾಕಷ್ಟು ಹೆಚ್ಚಿಗೆ ದೇಣಿಗೆಯನ್ನು ಪಡೆದು ಕೊಳ್ಳುವಂತೆ ನಿರ್ದೇಶಿಸಿದರು ಹಾಗೂ ಈ ರೀತಿ ಬಂದಂತಹ ದೇಣಿಗೆಯನ್ನು ಉಪಕರಣಗಳ ಖರೀದಿ ಮತ್ತು ಇನ್ನಿತರ ಮೂಲ ಸೌಲಭ್ಯಗಳಿಗೆ ಬಳಸಿಕೊಳ್ಳುವಂತೆ ಸೂಚಿಸಿದರು.<br>**ಕ್ರಮ:ನಿರ್ದೇಶಕರು, ಹಿಮ್ಸ್, ಹಾಸನ.** |
| 4 | 2007-08ನೇ ಸಾಲಿನ ಸಂಸ್ಥೆಯ ಅಡಿಟ್ ವರದಿಯನ್ನು ಅಂಗೀಕರಿಸುವುದು. | 2007-08ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಪೂರ್ಣಗೊಳಿಸಿ ಸಂಸ್ಥೆಯ ಸನ್ನದು ಲೆಕ್ಕಿಗರಾದ (ಚಾರ್ಟೆಡ್ ಅಕೌಂಟೆಂಟ್) ಶ್ರೀ. ಹೆಚ್. ಡಿ. ಅಭಿನಂದನ್ ಮತ್ತು ಕಂಪನಿಯವರು ಸಲ್ಲಿಸಿದ ವರದಿಯನ್ನು ಸಭೆಯಲ್ಲಿ ಮಂಡಿಸಲಾಯಿತು. ಸಭೆಯು 2007-08ನೇ ಸಾಲಿನ ಅಡಿಟ್ ವರದಿಯನ್ನು ಸುಧೀರ್ಘವಾಗಿ ಚರ್ಚಿಸಿ ಅಂಗೀಕರಿಸಿತು. |
| 5 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2009-10ನೇ ಸಾಲಿನ ಆಯ-ವ್ಯಯ ಮುಂಗಡದ ಅನುಮೋದನೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 2009-10ನೇ ಸಾಲಿಗೆ ರೂ.8450.00 ಲಕ್ಷಗಳ ಅನುದಾನದ ಆಯವ್ಯಯ ಮುಂಗಡ ಪತ್ರವನ್ನು ರೇಕಾರ್ಡ್ ಮಾಡಲಾಯಿತು. ಸರ್ಕಾರವು 2009-10ನೇ ಸಾಲಿಗೆ ಕಟ್ಟಡ ಕಾಮಗಾರಿಗೆ ರೂ.1650.00 ಲಕ್ಷಗಳು, ಸಿಬ್ಬಂದಿ ವೇತನ ಹಾಗೂ ಕಛೇರಿ ವೆಚ್ಚಕ್ಕಾಗಿ ರೂ.800.00ಲಕ್ಷಗಳನ್ನು ಮೀಸಲಿರಿಸಿರುವುದನ್ನು ಚರ್ಚಿಸಿ ಅಂಗೀಕರಿಸಲಾಯಿತು. |
| 6 | ಶ್ರೀ ಚಾಮರಾಜೇಂದ್ರ ಜಿಲ್ಲಾ ಆಸ್ಪತ್ರೆಯ 2009-10ನೇ ಸಾಲಿನ ಆಯ-ವ್ಯಯ ಮುಂಗಡ ಅನುದಾನವನ್ನು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವರ್ಗಾಯಿಸುವ ಬಗ್ಗೆ. | ಶ್ರೀ ಚಾಮರಾಜೇಂದ್ರ ಜಿಲ್ಲಾ ಆಸ್ಪತ್ರೆಗೆ 2009-10ನೇ ಸಾಲಿಗೆ 1059.00ಲಕ್ಷರೂಗಳ ಅನುದಾನದ ಆಯವ್ಯಯ ಮುಂಗಡ ಪತ್ರವನ್ನು ರೇಕಾರ್ಡ್ ಮಾಡಲಾಯಿತು. ಮಹಾ ಲೇಖಪಾಲರು (ಎ&ಇ) ಕರ್ನಾಟಕ, ಬೆಂಗಳೂರುರವರ ಪತ್ರ ಸಂಖ್ಯೆ: GE-IIIM-I/Genl/09-10/410, ದಿನಾಂಕ: 30-06-2009ರಂದು ಬರೆದಿರುವ ಪತ್ರದನ್ವಯ ಶ್ರೀ ಚಾಮರಾಜೇಂದ್ರ ಆಸ್ಪತ್ರೆಯ ಅನುದಾನವನ್ನು 01-09-2009ರಿಂದ ಅನ್ವಯವಾಗುವಂತೆ ಕಾಲೇಜಿಗೆ ಸರ್ಕಾರವು ವರ್ಗಾಯಿಸುವುದಕ್ಕೆ ಸಂಬಂಧಿಸಿದಂತೆ, ಕ್ರಮ ಕೈಗೊಳ್ಳುವುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | |
|---|---|---|
| 7 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವೈದ್ಯಕೀಯ ಶಿಕ್ಷಣ ಸಂಸ್ಥೆಗೆ ವಿಲೀನ ಗೊಂಡಿರುವ ವೈದ್ಯಾಧಿಕಾರಿಗಳ ವೇತನ ಹಾಗೂ ಇತರೆ ಭತ್ಯೆ ಪಾವತಿ ಬಗ್ಗೆ. | ಶ್ರೀ ಚಾಮರಾಜೇಂದ್ರ ಜಿಲ್ಲಾ ಆಸ್ಪತ್ರೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದ 10 ವೈದ್ಯಾಧಿಕಾರಿಗಳನ್ನು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಆಕುಕ:395:ಎಂಎಂಸಿ:2007, ದಿನಾಂಕ:28-07-2009ರ ಆದೇಶದನ್ವಯ ಸರ್ಕಾರವು ವಿಲೀನಗೊಳಿಸಿದ್ದು, ಸದರಿಯವರಿಗೆ 01-04-2009ರಿಂದ ಹಿಮ್ಸ್ ಸಂಸ್ಥೆಯ ಅನುದಾನದ ವತಿಯಿಂದ ವೇತನ ಪಾವತಿಸುತ್ತಿರುವುದನ್ನು ಅನುಮೋದಿಸಲಾಯಿತು.<br>ಸದರಿ ವೈದ್ಯರುಗಳು ವೈದ್ಯಕೀಯ ಶಿಕ್ಷಣ ಇಲಾಖೆಯ ಬೋಧಕ ಸಿಬ್ಬಂದಿಗೆ ಸರಿಸಮನಾಗಿ ವೇತನ ಮತ್ತು ಇತರೆ ಆರ್ಥಿಕ ಸೌಲಭ್ಯವನ್ನು ನೀಡಬೇಕೆಂದು ಕೋರಿ ಸಲ್ಲಿಸಿರುವ ಮನವಿ ಪತ್ರದ ಬಗ್ಗೆ ಚರ್ಚಿಸಿ ಇದರ ಬಗ್ಗೆ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಮತ್ತು ಆರು ವೈದ್ಯಕೀಯ ಕಾಲೇಜಿನ ನಿರ್ದೇಶಕರುಗಳು ಸಭೆ ಸೇರಿ ವಿಷಯವನ್ನು ಚರ್ಚಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಯಿತು.<br>**ಕ್ರಮ: ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಮತ್ತು ಎಲ್ಲಾ ಕಾಲೇಜಿನ ನಿರ್ದೇಶಕರುಗಳು.** |
| 8 | ಲಿಫ್ಟ್ ಹಾಗೂ ಡಿ.ಜಿ .ಸೆಟ್ ಅಳವಡಿಕೆ ಕಾಮಗಾರಿಗೆ ಟೆಂಡರ್ ಮೊತ್ತಕ್ಕಿಂತ Price Escalation ಮತ್ತು ಇತರೆ ವಿದ್ಯುತ್ ಕಾಮಗಾರಿಗೆ ಆಗಿರುವ ಹೆಚ್ಚುವರಿ ವೆಚ್ಚದ ಬಾಬ್ತಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಅನುದಾನ ಬಿಡುಗಡೆ ಬಗ್ಗೆ. | ಲಿಫ್ಟ್ ಕಾಮಗಾರಿಗೆ ಸಂಬಂಧಿಸಿದಂತೆ ಅಂದಾಜು ಮೊತ್ತ ರೂ.373.90ಲಕ್ಷಗಳ ಉಪ ಅಂದಾಜಿಗೆ ಮುಖ್ಯ ಇಂಜಿನಿಯರ್‌ರವರು ತಾಂತ್ರಿಕ ಅನುಮೋದನೆ ನೀಡಿ ಟೆಂಡರ್ ಕಾರ್ಯಾದೇಶ ಸಂಖ್ಯೆ: 51/07-08ರಲ್ಲಿ ರೂ.411.32 ಲಕ್ಷಗಳಿಗೆ ಅಂದರೆ ಶೇಕಡ 12ರಷ್ಟು ಹೆಚ್ಚುವರಿ ಮೊತ್ತಕ್ಕೆ ಕಾರ್ಯದೇಶವನ್ನು ನೀಡಿ ಲೋಕೋಪಯೋಗಿ ಇಲಾಖೆಯ ಮುಖಾಂತರ ಟೆಂಡರ್ ನೀಡಲಾಗಿರುತ್ತದೆ. ಆದರೆ ಕಾಮಗಾರಿಯನ್ನು ಕೈಗೊಳ್ಳುವ ಸಮಯದಲ್ಲಿ ಚೆಸ್ಕಾಂ ಅಧಿಕಾರಿಗಳ ಸೂಚನೆ ಮೇರೆಗೆ ಕೆಲವು ಬದಲಾವಣೆಯಾಗಿರುವುದರಿಂದ ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ಕೈಗೊಳ್ಳಲು ರೂ. 491.95 ಲಕ್ಷಗಳು ಅವಶ್ಯಕವಾಗಿ ಬೇಕಾಗಿರುತ್ತದೆ ಎಂದು ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು ಕಟ್ಟಡಗಳು ದಕ್ಷಿಣ ಕೆ.ಆರ್. ವೃತ್ತ ಬೆಂಗಳೂರುರವರು 4-12-2008 ಪತ್ರದಲ್ಲಿ |

| | | |
|---|---|---|
| | | ತಿಳಿಸಿರುವುದರಿಂದ, ಹೆಚ್ಚುವರಿ ಬಾಬ್ತಿನ ಮೊತ್ತವಾದ ರೂ.118.05ಲಕ್ಷಗಳ ಹೆಚ್ಚುವರಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ ರೂ.128.93ಲಕ್ಷ ಅನುದಾನ ಬಿಡುಗಡೆಗಾಗಿ ಆರ್ಥಿಕ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ಹೆಚ್ಚುವರಿ ಕಾಮಗಾರಿಯ ಬಗ್ಗೆ EIRLC & Work Slip ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಹೆಚ್ಚುವರಿ ಮೊತ್ತಕ್ಕೆ ಸಮಂಜಸವಾದ ಕಾರಣಗಳನ್ನು ನೀಡಿ ಮಾನ್ಯ ಜಿಲ್ಲಾಧಿಕಾರಿಯವರಿಂದ ಪರಿಶೀಲನೆ ಮಾಡಿಸಿ ನಂತರ ಸರ್ಕಾರಕ್ಕೆ ಸಲ್ಲಿಸುವಂತೆ ತೀರ್ಮಾನ ಕೈಗೊಳ್ಳಲಾಯಿತು.<br>**ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ.** |
| 09 | ಶ್ರೀ ಚಾಮರಾಜೇಂದ್ರ ಬೋಧಕ ಆಸ್ಪತ್ರೆಗೆ ಡಯಾಲಿಸಿಸ್ ಯಂತ್ರವನ್ನು ಖರೀದಿಸಿ ಅಳವಡಿಸಲು ಟೆಂಡರ್ ಕರೆದಿರುವ ಬಗ್ಗೆ. | ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ,ಹಾಸನರವರು ದಿನಾಂಕ: 16-02-2009ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಯವರಿಗೆ ಪತ್ರ ಬರೆದು ಜಿಲ್ಲೆಯಲ್ಲಿ ಹಲವಾರು ರೋಗಿಗಳು ಮೂತ್ರ ಕೋಶದ ವೈಫಲ್ಯದಿಂದ ಬಳಲುತ್ತಿದ್ದು ಜಿಲ್ಲಾ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಚಿಕಿತ್ಸಾ ಸೌಲಭ್ಯ ಇಲ್ಲದಿರುವುದರಿಂದ ಜನಸಾಮಾನ್ಯರಿಗೆ ಹಾಗೂ ಬಡವರಿಗೆ ಚಿಕಿತ್ಸೆ ಪಡೆಯಲು ಕಷ್ಟಕರವಾಗಿರುತ್ತದೆ. ಅದುದರಿಂದ ವೈದ್ಯಕೀಯ ಕಾಲೇಜಿನಲ್ಲಿ ಡಯಾಲಿಸಿಸ್ ಘಟಕಗಳನ್ನು ಪ್ರಾರಂಭಿಸಬೇಕೆಂದು ಸರ್ಕಾರಕ್ಕೆ ಬರೆದ ಪತ್ರದ ಬಗ್ಗೆ ಚರ್ಚಿಸಲಾಯಿತು. ಡಯಾಲಿಸಿಸ್ ಘಟಕಗಳನ್ನು ಪ್ರಾರಂಭಿಸಲು ಸಂಸ್ಥೆಯಿಂದ ಒಬ್ಬರು ವೈದ್ಯರನ್ನು ಹಾಗೂ 4 ಶುಶ್ರೂಷಕರನ್ನು 15-06-2009ರಿಂದ 14-07-2009 ರವರೆಗೆ ಡಯಾಲಿಸಿಸ್ ತರಬೇತಿಗಾಗಿ ನೆಫ್ರೋಯೂರಾಲಜಿ ಸಂಸ್ಥೆ, ಬೆಂಗಳೂರು, ಇಲ್ಲಿಗೆ ನಿಯೋಜಿಸಲಾಗಿರುತ್ತದೆ ಹಾಗೂ ತಾಂತ್ರಿಕ ಸಲಹೆ ಪಡೆದು ನಾಲ್ಕು ಡಯಾಲಿಸಿಸ್ ಯಂತ್ರಗಳನ್ನು ಖರೀದಿಸಲು ದಿನಾಂಕ: 16-06-2009ರಂದು ಟೆಂಡರ್ ಪತ್ರಿಕಾ ಪ್ರಕಟಣೆ ನೀಡಿದ್ದು 21-07-2009ರಂದು ಟೆಂಡರ್ ತೆಗೆದು ಪಾರದರ್ಶಕ ನಿಯಮದಡಿ ಸರಬರಾಜು ಆದೇಶ ನೀಡಲಾಗುವುದೆಂದು ನಿರ್ದೇಶಕರು ಸಭೆಗೆ ತಿಳಿಸಿದರು. ಸದರಿ ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ಅನುಮೋದಿಸಲಾಯಿತು. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | |
|---|---|---|
| | | ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ. |
| 10 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವ್ಯಾಪ್ತಿಗೆ ಒಳಪಡುವ ಹಾಲಿ ಹಾಗೂ ಉದ್ದೇಶಿತ ಕಟ್ಟಡಗಳಿಗೆ ಒಳನೀರು ಸರಬರಾಜು ಯೋಜನೆ ಬಗ್ಗೆ ತಾಂತ್ರಿಕ ಸಲಹೆ ಸೇವೆಯ ಬಗ್ಗೆ. | ದಿನಾಂಕ: 17-09-2008 ರಂದು ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ಕಟ್ಟಡ ಕಾಮಗಾರಿ ಸಮಿತಿ ಸಭೆಯಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವ್ಯಾಪ್ತಿಗೆ ಒಳಪಡುವ ಹಾಲಿ ಹಾಗೂ ಉದ್ದೇಶಿತ ಕಟ್ಟಡಗಳಿಗೆ ಒಳನೀರು ಸರಬರಾಜು ಯೋಜನೆ ಬಗ್ಗೆ ತಾಂತ್ರಿಕ ಸಲಹೆ ಪಡೆಯುವ ಬಗ್ಗೆ ಚರ್ಚಿಸಲಾಗಿರುತ್ತದೆ. ತಾಂತ್ರಿಕ ಸಲಹೆ ಸೇವೆಗೆ ರೂ.3.50ಲಕ್ಷಗಳು ಮತ್ತು ಸೇವಾ ತೆರಿಗೆಯಾಗುವುದೆಂದು Civil-Aid Technoclinic Pvt.Ltdರವರು ತಿಳಿಸಿದ್ದಾರೆಂದು ಲೋಕೋಪಯೋಗಿ ಇಲಾಖೆಯವರು ಬರೆದಿರುವ ಪತ್ರದ ಬಗ್ಗೆ ಚರ್ಚಿಸಲಾಯಿತು. ಸದರಿ ಸಂಸ್ಥೆಯವರ ಸಲಹಾ ಶುಲ್ಕವು ದುಬಾರಿಯಾಗಿದ್ದು ಈ ಯೋಜನೆಯ ಬಗ್ಗೆ ತಾಂತ್ರಿಕ ಸಲಹೆಯನ್ನು ರಾಜ್ಯ ಸರ್ಕಾರದ ಇಲಾಖೆಯ ಸ್ಥಳಿಯ ನುರಿತ ಅಭಿಯಂತರರುಗಳಾದ BWSSBಯ ಉಪ ನಿರ್ದೇಶಕರು, ಜಿಲ್ಲಾ ಜಲಾನಯ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಂದ Water Harvesting ವಿಧಾನದ ಬಗ್ಗೆ KSCSTರವರಿಂದ ತಾಂತ್ರಿಕ ಸಲಹೆಯನ್ನು ಪಡೆದು ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲಾಯಿತು.<br>ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ. |
| 11 | ಗ್ರಂಥಾಲಯ ಪುಸ್ತಕಗಳ ಖರೀದಿಗೆ ಪಾರದರ್ಶಕ ನಿಯಮದಡಿ ಟೆಂಡರ್ ಕರೆಯುವ ಬಗ್ಗೆ. | ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ 2010-11ನೇ ಸಾಲಿನ ಅವಧಿಗೆ ಒಟ್ಟು 7000 ಸಾವಿರ ಪುಸ್ತಕಗಳು ಹಾಗೂ 100 ನಿಯತಕಾಲಿಕೆಗಳು ಅವಶ್ಯವಿರುತ್ತದೆ. ಇದೀಗ 5400 ಪುಸ್ತಕಗಳು ಗ್ರಂಥಾಲಯದಲ್ಲಿ ಲಭ್ಯವಿದ್ದು, ಬಾಕಿ 1600 ಪುಸ್ತಕಗಳು ಹಾಗೂ 100 ನಿಯತಕಾಲಿಕೆಗಳನ್ನು ಖರೀದಿಸಬೇಕಾಗಿರುತ್ತದೆ. ಮತ್ತು ಡಿಜಿಟಲ್ ಲೈಬ್ರರಿ ಪ್ರಾರಂಭಿಸಬೇಕಾಗಿ ರುತ್ತದೆ. ಈ ಎಲ್ಲಾ ಸೌಲಭ್ಯಗಳನ್ನು ಅಳವಡಿಸಿಕೊಳ್ಳಲು ಸುಮಾರು 68.00 ಲಕ್ಷ ರೂಗಳ ಅವಶ್ಯವಿರುತ್ತದೆ. ಇದರ ಬಗ್ಗೆ ಚರ್ಚಿಸಿ ಪಾರದರ್ಶಕ ನಿಯಮದಡಿ ಟೆಂಡರ್ ಕರೆದು ಖರೀದಿಸಲು ಅನುಮೋದನೆ ನೀಡಲಾಯಿತು.<br>ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | |
|---|---|---|
| 12 | 11 ತಿಂಗಳು ಅವಧಿ ಮುಗಿದಿರುವ 40 ಟ್ರೈನಿಂಗ್ ಸ್ಟಾಫ್ ನರ್ಸ್‌ಗಳ ಸೇವೆಯನ್ನು ತಾತ್ಕಲಿಕವಾಗಿ ಆರು ತಿಂಗಳ ಅವಧಿಗೆ ಮುಂದುವರಿಸಿರುವ ಬಗ್ಗೆ. | ದಿನಾಂಕ: 09-04-2008ರಂದು ನಡೆದ ಆರ್ಥಿಕ ಸಮಿತಿ ಸಭೆ ತೀರ್ಮಾನದನ್ವಯ ಟ್ರೈನಿಂಗ್ ನರ್ಸ್ ಎಂದು ಪರಿಗಣಿಸಿ ಮೆರಿಟ್ ಮತ್ತು ರೋಸ್ಟರ್ ನಿಯಮದಡಿ 40 ಸಾಫ್ ನರ್ಸ್‌ಗಳನ್ನು ನೇಮಕ ಮಾಡಿಕೊಳ್ಳಲಾಗಿರುತ್ತದೆ. ಮೇ 2009ರ ಅಂತ್ಯಕ್ಕೆ ಟ್ರೈನಿಂಗ್ ನರ್ಸ್‌ಗಳ 11 ತಿಂಗಳ ಅವಧಿಯು ಪೂರ್ಣಗೊಂಡಿದ್ದರಿಂದ ಹಾಗೂ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದುದರಿಂದ ತುರ್ತು ಅವಶ್ಯಕತೆಯನ್ನು ಪರಿಗಣಿಸಿ ಇವರ ಅವಧಿಯನ್ನು ಮತ್ತೆ ಆರು ತಿಂಗಳ ಅವಧಿಗೆ ವಿಸ್ತರಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. |
| 13 | ಅನುರಿತ ಕಾರ್ಮಿಕರು ಮತ್ತು ಭದ್ರತಾ ಸಿಬ್ಬಂದಿಯವರಿಗೆ VDA ಪಾವತಿ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಅನುರಿತ ಕಾರ್ಮಿಕರು ಮತ್ತು ಭದ್ರತಾ ಸಿಬ್ಬಂದಿಯವರನ್ನು ಟೆಂಡರ್ ಮೂಲಕ ನೇಮಕ ಮಾಡಿಕೊಂಡಿದ್ದು 2009-10ನೇ ಸಾಲಿನ VDA ಬಾಬ್ತು ತಲಾ ರೂ.298.80 ಗಳನ್ನು ಏಪ್ರಿಲ್ 2009ರಿಂದ ಪಾವತಿಸುವಂತೆ ಟೆಂಡರ್ ದಾರರು ಮನವಿ ಸಲ್ಲಿಸಿರುವುದನ್ನು ಚರ್ಚಿಸಿ, ಸದರಿ ಟೆಂಡರ್ ಅವದಿ ಮೂರು ವರ್ಷಗಳ ಅವಧಿಯ ಟೆಂಡರ್ ಆಗಿರುವುದರಿಂದ ನಿಬಂಧನೆಯಂತೆ ಟೆಂಡರ್‌ದಾರರೇ VDA ಪಾವತಿಸಬೇಕಾಗುತ್ತದೆ ಎಂದು ತೀರ್ಮಾನಿಸಲಾಯಿತು. ಈ ರೀತಿಯ ಸೇವೆಗಳಿಗೆ ಮುಂದೆ ಟೆಂಡರ್ ಕರೆಯುವಾಗ ಒಂದು ವರ್ಷದ ಅವಧಿಗೆ ಟೆಂಡರ್ ಕರೆಯುವಂತೆ ನಿರ್ದೇಶಿಸಲಾಯಿತು.<br>**ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ.** |
| 14 | ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಹಾಸನ ಶಾಖೆ, ಹಾಸನ ಇವರು 2.3ಲಕ್ಷರೂಗಳ ದೇಣಿಗೆ ನೀಡಿದ್ದು ಈ ದೇಣಿಗೆಯನ್ನು ಸಂಸ್ಥೆಯ 6 ವಸತಿ ಗೃಹಗಳನ್ನು ಅತಿಥಿ ಗೃಹಗಳನ್ನಾಗಿ ಮಾರ್ಪಡಿಸಿ ವಾಸ್ತವ್ಯಕ್ಕೆ ಅನುಕೂಲವಾಗುವಂತೆ ಸುಸಜ್ಜಿತಗೊಳಿಸುವ ಬಗ್ಗೆ . | ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಹಾಸನ ಶಾಖೆ, ಹಾಸನ ಇವರು ಸಂಸ್ಥೆಗೆ ಟಾಯೋಟಾ ಇನೋವಾ ಕಾರು ಖರೀದಿಸಲು ರೂ.1383323.00ಲಕ್ಷ ಗಳನ್ನು ದೇಣಿಗೆ ರೂಪದಲ್ಲಿ ಸಂಸ್ಥೆಗೆ ನೀಡಿರುತ್ತಾರೆ. ವಾಹನ ಖರೀದಿಸಲು ಸಂಸ್ಥೆಗೆ ತೆರಿಗೆ ವಿನಾಯಿತಿ ದೊರಕಿದ್ದರಿಂದ ರೂ.11, 51005.00ಮೊತ್ತದಲ್ಲಿ ವಾಹನವನ್ನು ಖರೀದಿಸಿ ಉಳಿಕೆ ಮೊತ್ತವಾದ ರೂ.2,32,318.00 ವಂತಿಕೆಯಲ್ಲಿ ಪರೀಕ್ಷೆ ಹಾಗೂ ಇತರೆ ಸಂದರ್ಭದಲ್ಲಿ ಅತಿಥಿಗಳ ವಾಸ್ತವ್ಯಕ್ಕೆ |

| | | |
|---|---|---|
| | | ಅನುಕೂಲವಾಗುವಂತೆ, ಅತಿಥಿಗೃಹಗಳಿಗೆ ಪೀಠೋಪಕರಣಗಳು, ಬೆಡ್ಸ್, ಪಿಲ್ಲೋ ಗಳು, ಬ್ಲಾಂಕೆಟ್ಸ್‌ಗಳು ಹಾಗೂ ಇತರೆ ಪರಿಕರಗಳನ್ನು ಖರೀದಿಸಲು ಅನುಮೋದನೆ ನೀಡಲಾಯಿತು.<br>**ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ.** |
| 15 | ಸಂಸ್ಥೆಯ ಉಪಕರಣಗಳ ವಾರ್ಷಿಕ ನಿರ್ವಹಣ ಗುತ್ತಿಗೆ ( ಎ.ಎಮ್.ಸಿ.) ನೀಡುವ ಬಗ್ಗೆ. | ಸಂಸ್ಥೆಗೆ ಪ್ರಾರಂಭದಿಂದ ಇದುವರೆಗೂ 540.00 ಲಕ್ಷರೂಗಳ ಉಪಕರಣಗಳನ್ನು ಖರೀದಿಸಲಾಗಿದ್ದು ಸದರಿ ಉಪಕರಣಗಳ Warranty Period ಮುಗಿಯುತ್ತಿರುವುದರಿಂದ ಸದರಿ ಉಪಕರಣಗಳಿಗೆ ನಿಯಮಾನುಸಾರ ಎಎಮ್‌ಸಿ ನೀಡಲು ಅನುಮೋದನೆ ನೀಡಲಾಯಿತು.<br>**ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ.** |
| 16 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಟ್ಟಡಗಳಿಗೆ ಸೋಲಾರ್ ವಾಟರ್ ಹೀಟರ್ ಅಳವಡಿಸಲು ಟೆಂಡರ್ ಕರೆಯುವ ಬಗ್ಗೆ. | ದಿನಾಂಕ:16-06-2009ರಂದು ಸನ್ಮಾನ್ಯ ರಾಮಚಂದ್ರಗೌಡ, ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಅಧ್ಯಕ್ಷರು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ , ಹಾಸನ ಇವರ ಅಧ್ಯಕ್ಷತೆಯಲ್ಲಿ ನಡೆದ ಕಟ್ಟಡ ಕಾಮಗಾರಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಹಾಸ್ಟೆಲ್ ಕಟ್ಟಡಕ್ಕೆ ವಿದ್ಯುತ್ ಗೀಸರ್‌ಗಳನ್ನು ಅಳವಡಿಸುವ ಬದಲು ವಾಕ್ಯೂಮ್ ಟ್ಯೂಬ್ ಸೋಲಾರ್ ವಾಟರ್ ಸಿಸ್ಟಂ ಅಳವಡಿಸಲು ತೀರ್ಮಾನ ಕೈಗೊಂಡಿರುವುದನ್ನು ಪರಿಗಣಿಸಿ ಡಿ.ಜಿ.ಎಸ್.&ಡಿದರದಲ್ಲಿ MSIL ಕಂಪನಿಯವತಿಯಿಂದ ಖರೀದಿಸಲು ತೀರ್ಮಾನ ಕೈಗೊಳ್ಳಲಾಯಿತು.<br>**ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ.** |
| 17 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬಾಲಕ ಮತ್ತು ಬಾಲಕಿಯರ ವಸತಿ ನಿಲಯ ಹಾಗೂ ವೈದ್ಯ ವಸತಿ ನಿಲಯಗಳಿಗೆ ಡೀಸೆಲ್ ಜನರೇಟರ್‌ಗಳನ್ನು ಅಳವಡಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬಾಲಕ ಮತ್ತು ಬಾಲಕಿಯರ ವಸತಿ ನಿಲಯಗಳಿಗೆ ಎರಡು ಲಿಫ್ಟ್‌ಗಳು ಹಾಗೂ ವೈದ್ಯರ ವಸತಿ ನಿಲಯಗಳಿಗೆ ಎರಡು ಲಿಫ್ಟ್‌ಗಳನ್ನು ಅಳವಡಿಸಲಾಗಿರುತ್ತದೆ. ಈ ಕಟ್ಟಡಗಳು ಕ್ರಮವಾಗಿ ಏಳು ಮತ್ತು ಎಂಟು ಅಂತಸ್ತುಗಳನ್ನು ಹೊಂದಿರುವುದರಿಂದ ವಿದ್ಯುತ್ ವ್ಯತ್ಯಯದ ಅಗತ್ಯತೆಗೆ ಅನುಕೂಲವಾಗಲು ಡಿ.ಜಿ.ಸೆಟ್ ಅನ್ನು ಅಳವಡಿಸುವುದು ಅತ್ಯವಶ್ಯಕವಾಗಿರುತ್ತದೆ ಎಂದು ದಿನಾಂಕ:28-01-2009ರಂದು ನಡೆದ ಕಟ್ಟಡ ಕಾಮಗಾರಿ ಸಮಿತಿಯಲ್ಲಿ ನಿರ್ಣಯ ಕೈಗೊಳ್ಳಲಾಗಿರುತ್ತದೆ. ಇದರನ್ವಯ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | |
|---|---|---|
| | | ಡಿ.ಜಿ.ಸೆಟ್ ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳುವುದರ ಬಗ್ಗೆ ದಿನಾಂಕ: 11-02-2009ರಂದು ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು ಕಟ್ಟಡ, (ದಕ್ಷಿಣ)ರವರಿಗೆ ಪತ್ರ ಬರೆಯಲಾಗಿದೆ ಎಂದು ನಿರ್ದೇಶಕರು ಸಭೆಗೆ ವಿವರಿಸಿದರು ಲೋಕೋಪಯೋಗಿ ಇಲಾಖೆಯಿಂದ ನಿಯಮಾನುಸಾರ ಟೆಂಡರ್ ಕರೆದು ಖರೀದಿಸಲು ತೀರ್ಮಾನ ಕೈಗೊಳ್ಳಲಾಯಿತು.<br>**ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ.** |
| 18 | ನೂತನವಾಗಿ ಪ್ರಾರಂಭವಾಗುತ್ತಿರುವ 750 ಹಾಸಿಗೆಗಳ ಹೈಟೆಕ್ ಆಸ್ಪತ್ರೆಯನ್ನು ಸುಸಜ್ಜಿತಗೊಳಿಸಲು ಅಗತ್ಯವಿರುವ ರೂ. 500.00 ಲಕ್ಷಗಳ ಅನುದಾನ ಬಿಡುಗಡೆ ಬಗ್ಗೆ. | ನೂತನವಾಗಿ ಪ್ರಾರಂಭವಾಗುತ್ತಿರುವ 750 ಹಾಸಿಗೆಗಳ ಹೈಟೆಕ್ ಆಸ್ಪತ್ರೆಯು ಮೊದಲನೇ ಹಂತದಲ್ಲಿ 400 ಹಾಸಿಗೆಗಳ ಸಾಮರ್ಥ್ಯಕ್ಕೆ ಅನುಕೂಲವಾಗುವಂತೆ ಕಾಮಗಾರಿಯು ಪ್ರಗತಿಯಲ್ಲಿದ್ದು, ಡಿಸೆಂಬರ್ ಮಾಹೆಯಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಹಸ್ತಾಂತರವಾಗುತ್ತಿದೆ. ಈ ನೂತನ ಆಸ್ಪತ್ರೆಗೆ ಎಲ್ಲಾ ಮೂಲಭೂತ ಸೌಕರ್ಯಗಳು ಮತ್ತು ಪೀಠೋಪಕರಣಗಳನ್ನು ಒದಗಿಸಿ ಸುಸಜ್ಜಿತಗೊಳಿಸಲು, ಸುಮಾರು ರೂ.500.00 ಲಕ್ಷಗಳ ಅನುದಾನ ಅಗತ್ಯವಿರುವುದರ ಬಗ್ಗೆ. ಆಡಳಿತಾತ್ಮಕ ಅನುಮೋದನೆ ಹಾಗೂ ಅನುದಾನದ ಬಿಡುಗಡೆಯ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಯಿತು. ಅಗತ್ಯ ಉಪಕರಣಗಳ Specification ಪಡೆದು ನಿಯಮಾನುಸಾರ ಟೆಂಡರ್ ಕರೆದು ಖರೀದಿಸಲು ತೀರ್ಮಾನಿಸಲಾಯಿತು.<br>**ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ.** |
| 19 | 3ನೇ ಹಂತದ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಪಡೆಯುವುದು ಹಾಗೂ ಈ ಕಾಮಗಾರಿಗೆ ಸಂಬಂಧಿಸಿದಂತೆ ಅನುದಾನ ಬಿಡುಗಡೆ ಮತ್ತು ಟೆಂಡರ್ ಪ್ರಕ್ರಿಯೆ ಬಗ್ಗೆ. | ಭಾರತೀಯ ವೈದ್ಯಕೀಯ ಪರಿಷತ್ತಿನ ಪರಿವೀಕ್ಷಕರು ಪರಿವೀಕ್ಷಣೆಯಲ್ಲಿ ಸೂಚಿಸಿರುವ ಹಾಗೂ ಇತರೆ ಅಗತ್ಯ ಕಾಮಗಾರಿಗಳು ಅಂದರೆ Construction of Nursing Quarters/ Residential Quarters/ Auditorium/ Indoor Sports / Land Scaping/ Street Light / All round Compound/ Fire Exhausts/ Fire Detectors and Fire Protectors / Rain Harvesting / Guest House/ Lift of Residents and Nursing Quarters/ MS, CAO & FO quarters/ CEO, Zilla panchayat, |

| | | |
|---|---|---|
| | | ಹಾಸನ ಇವರ ನಿವಾಸವನ್ನು ಸಂಸ್ಥೆಯ ನಿರ್ದೇಶಕರಿಗೆ ಬಿಟ್ಟುಕೊಡಬೇಕಾಗಿರುವುದರಿಂದ CEO, Zilla panchayat, ಹಾಸನರವರಿಗೆ ವಸತಿ ಗೃಹ ನಿರ್ಮಿಸಿಕೊಡುವ ಕಾಮಗಾರಿ ಹಾಗೂ ಇತರೆ ಕಾಮಗಾರಿಗಳ ಬಗ್ಗೆ ಮೂರನೇ ಹಂತದಲ್ಲಿ ನಿರ್ಮಾಣ ಕೈಗೊಳ್ಳಬೇಕಾಗಿರುತ್ತದೆ. ಈ ಕಾಮಗಾರಿಗಳಿಗೆ ರೂ.6200.00ಲಕ್ಷಗಳ ಅನುದಾನದ ಅವಶ್ಯಕತೆ ಇರುತ್ತದೆ ಎಂದು ಲೋಕೋಪಯೋಗಿ ಇಲಾಖೆಯಿಂದ ನೀಡಿರುವ ರೇಖಾ ಅಂದಾಜಿನ ಬಗ್ಗೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್ ಪ್ರಕ್ರಿಯೆ ನಡೆಸುವ ಬಗ್ಗೆ ನಿರ್ದೇಶಕರು ಸಭೆಗೆ ಮಂಡಿಸಿದರು. ಮೂರನೇ ಹಂತದ ಕಾಮಗಾರಿಗಳ ಅಂದಾಜು ಮೊತ್ತ ರೂ.6200.00ಲಕ್ಷಗಳು ಅಧಿಕವಾಗಿರುವುದರಿಂದ ಸದರಿ ಅಂದಾಜನ್ನು ಅರ್ಧಮೊತ್ತಕ್ಕೆ ಇಳಿಸಿ ಪ್ರಸ್ತಾವನೆಯನ್ನು ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸುವಂತೆ ನಿರ್ದೇಶಕರಿಗೆ ಸೂಚಿಸಲಾಯಿತು .ದಾದಿಯರ ಮತ್ತು ನಿವಾಸಿ ವೈದ್ಯರ ವಸತಿ ಗೃಹಗಳನ್ನು ಹಾಸನ ದಲ್ಲಿ ಗೃಹ ಮಂಡಳಿಯವತಿ ನಿರ್ಮಿಸಲ್ಪಟ್ಟಿರುವ ಮನೆಗಳನ್ನು ಒಟ್ಟು ಖರೀದಿ ಆಧಾರದಲ್ಲಿ ಹೆಚ್ಚು ಗೃಹಗಳನ್ನು ಖರೀದಿಸಲು ಗೃಹಮಂಡಳಿಯೊಂದಿಗೆ ವ್ಯವಹರಿಸುವಂತೆ ನಿರ್ದೇಶಿಸಲಾಯಿತು.<br>**ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ.** |
| 20 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು. | ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು. |

(ಶ್ರೀನಿವಾಸ ಗೌಡ)
ಆರ್ಥಿಕ ಅಧಿಕಾರಿಗಳು, ಹಾಗೂ
ಸದಸ್ಯ ಕಾರ್ಯದರ್ಶಿ, ಆರ್ಥಿಕ ಸಮಿತಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

(ಡಾ. ಕೆ.ಎಸ್.ಗಂಗಾಧರ )
ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ

(ಶ್ರೀ ವಿ. ಉಮೇಶ್)
ಅಧ್ಯಕ್ಷರು ಆರ್ಥಿಕ ಸಮಿತಿ, ಹಿಮ್ಸ್, ಹಾಗೂ
ಪ್ರಧಾನ ಕಾರ್ಯದರ್ಶಿಗಳು( ವೈ.ಶಿ),
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ಬೆಂಗಳೂರು.